ಕೆ.ಸಿ.ಡಿ. ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ
ಅಂತರ್ ಮಹಾವಿದ್ಯಾಲಯ ಯುವಜನೋತ್ಸವ 2016-17
ದಿನಾಂಕ : 08-11-2016, ಸೋಮವಾರ | ಕರ್ನಾಟಕ ಕಾಲೇಜು ಧಾರವಾಡ : ಬಿ. ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ | ವಿಶೇಷ ಸಂಚಿಕೆ : 6

## ಪೋಸ್ಟರ್ ಮೇಕಿಂಗ್

# ಚಿತ್ತಾರಗಳ ಮೂಲಕ ಗಮನ ಸೆಳೆದ ವಿದ್ಯಾರ್ಥಿ ಕಲಾವಿದರು





ಭಾಷಾ ತಾರತಮ್ಯ, ಪ್ರದೇಶವಾರು ತಾರತಮ್ಯ, ಜಾತಿ ತಾರತಮ್ಯ, ವೇತನದಲ್ಲಿ ತಾರತಮ್ಯ, ದೌರ್ಜನ್ಯ ವಿರೋಧಿಸಿ, ಹೀಗೆ ಹತ್ತು ಹಲವಾರು ಸಮಸ್ಯೆಗಳ ವಿರುದ್ಧ ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿ "ಬಂದ" ಸಾಮಾನ್ಯವಾದ ಪ್ರಕ್ರಿಯೆ ಆಗಿದೆ ಎಂದು ಯುವ ವಿದ್ಯಾರ್ಥಿ ಕಲಾವಿದರು ತಮ್ಮ ಚಿತ್ರಗಳ ಮೂಲಕ ಬಂದ ಮಾಡುವುದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆದ ಯುಜನೋತ್ಸವದ " ಪೋಸ್ಟರ್ ಮೇಕಿಂಗ್" ಸ್ಪರ್ಧೆಯಲ್ಲಿ ವಿದ್ಯಾರ್ಥಿಕಲಾವಿದರು ತಮ್ಮ ಚಿತ್ತಾರಗಳ ಮೂಲಕ ಗಮನಸೆಳೆದರು. ಈ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ತಮ್ಮ ಚಿತ್ರಗಳಲ್ಲಿ ಜನರ ಮೇಲೆ ಪೋಲಿಸರ ಲಾಠಿ ಪ್ರಹಾರ್, ಬಸ್ಸಿಗೆ ಬೆಂಕಿ ಹಚ್ಚುವಿಕೆ, ಕಲ್ಲುತೂರಾಟ, ಸಾರ್ವಜನಿಕ ಮತ್ತು ಸರಕಾರಿ ಆಸ್ತಿಗೆ ಹಾನಿಗೊಳಿಸುವ ಎಲ್ಲವನ್ನು ವಾಸ್ತವಿಕತೆಯನ್ನು ದೃಶ್ಯಗಳ ಮೂಲಕ ಕಲಾವಿದರು ತಮ್ಮ ಕುಂಚದ ಮೂಲಕ ಸಂದೇಶವನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಸ್ಪರ್ಧೆಯ ಕರ್ನಾಟಕ ಕಲಾ ಮಹಾವಿದ್ಯಾಲಯದ ವಿ.ಕೃ.ಗೋಕಾಕ ಗ್ರಂಥಾಲಯದಲ್ಲಿ ನಡೆದ ಸ್ಪರ್ಧೆಯಲ್ಲಿ ನಾಲ್ಕು ಕಾಲೇಜುಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಧು ದೇಸಾಯಿ ಮತ್ತು ಗಾಯತ್ರಿ ದೇಸಾಯಿ ತೀರ್ಪುಗಾರರಾಗಿ ಆಗಮಿಸಿದ್ದರು.

**ಪೂಜಾ.ಬಿ**
**ರವಿ ನಾಯ್ಕ**
**ಬಿ.ಎ ಪ್ರಥಮ ವರ್ಷ**

## ಇಂಗ್ಲೀಷ್ ಭಾಷಾ ಚರ್ಚಾ ಸ್ಪರ್ಧೆ....

# ಮಾನವ ಸಂಕುಲಕ್ಕೆ ವಿಜ್ಞಾನ ವರದಾನವಾಗಿದೆ



ವಿಜ್ಞಾನವು ಹೇಗೆ ನಮ್ಮ ಜೀವನದಲ್ಲಿ ಹಾಸು ಹೂಕ್ಕಾಗಿದೆ ವಿಜ್ಞಾನವು ನಮ್ಮ ಜೀವನದಲ್ಲಿ ಎಷ್ಟು ಮಹತ್ವ ಪಡೆದಿದೆ. ವಿಜ್ಞಾನವು ಸುಖಿ ಜೀವನಕ್ಕೆ ರಹದಾರಿ ಯಾಗಿದ್ದು, ಇಂಧನ ಶಕ್ತಿ, ವಿದ್ಯುಚ್ಛಕ್ತಿ ಆರೋಗ್ಯ, ಸಾರಿಗೆ, ಕೃಷಿ, ಅಂತರಜಾಲ್, ವಿಜ್ಞಾನ ಹೀಗೆ ಜೀವ ಸಂಕುಲಕ್ಕೆ ಪ್ರಯೋಜನವಾಗಿದೆ ಮತ್ತು ತಾಂತ್ರಿಕ ಕ್ರಾಂತಿಯಿಂದ ಯಾವ ರೀತಿ ಲಾಭ ನಷ್ಟಗಳಾಗಿವೆ ಎಂಬ ಹಲವಾರು ವಿಷಯಗಳನ್ನು ಉದಾಹರಣೆ ಸಮೇತವಾಗಿ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ ಯುವಜನೋತ್ಸವದ ಇಂಗ್ಲೀಷ ಭಾಷಾ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ವಿಷಯ ಮುಖ್ಯ ಅಂಶಗಳು " ಸುಖಿ ಜೀವನ್ಕೆ ವಿಜ್ಞಾನವೊಂದು ಮಾರ್ಗ" ಎಂಬ ವಿಷಯದ ವಸ್ತುವಿನ ಕುರಿತು ಸ್ಪರ್ಧಾಳುಗಳು ವಾದ ವಿವಾದ ಬಿಸಿಬಿಸಿ ಚರ್ಚೆಗೆ ಗ್ರಾಸವಾಯಿತು. ಈ ಸ್ಪರ್ಧೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಆಂಗ್ಲ ಭಾಷೆಯಲ್ಲಿ ಪ್ರತಿವಾದಿಗಳಿಗೆ ಪ್ರತ್ಯುತರ ಸಮೇತವಾಗಿ ಚಕಿತಗೊಳಿಸುವಂತೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಇಲ್ಲಿ ಸ್ಪರ್ಧಾಳುಗಳ ಭಾಷೆ, ಸಂವಹನ ಕೌಶಲ್ಯ, ಅವರ ಹಾವ ಭಾವ, ಪ್ರಸ್ತುತವಾಗಿ ನಡೆಯುವ ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳು ಸಮರ್ಥವಾದ ವಿಷಯವನ್ನು ಮಂಡಿಸಿದರು. ಈ ಸ್ಪರ್ಧೆಯನ್ನು ಪ್ರೋ ವೀರೆಂದ್ರ ಯಾದವ್ ಹಾಗೂ ವಿಣಾ ಹೋಳೆಯಣ್ಣವರ್ ಸ್ಪರ್ಧೆಯ ಉಸ್ತುವಾರಿ ವಹಿಸಿದ್ದರು. ಪ್ರೋ. ಬಸವರಾಜ್ ವಾಸನ್, ಪ್ರೋ. ಶ್ವೇತಾ ನಾಯಿಕ್ ಹಾಗೂ ಅನಿರುದ್ಧ ಎಂ ತೀರ್ಪುಗಾರರಾಗಿ ಆಗಮಿಸಿದ್ದರು.

**ಕೆ.ಆರ್ ಚೈತ್ರ**
**ಬಿ.ಎ ಪ್ರಥಮ ವರ್ಷ**

## ಕನ್ನಡ ಭಾಷಾ ಚರ್ಚಾ ಸ್ಪರ್ಧೆ

# "ಧರ್ಮವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗಿದೆ"




ಭಾರತದಂತಹ ದೇಶವು ಪ್ರಾಚೀನ ಕಾಲದಿಂದಲೂ ಇಂದಿನ ಆಧುನಿಕತೆ ವರೆಗೆ ಆಗುತ್ತಿರುವ ಧರ್ಮದ ಶೋಷಣೆ, ಸಮಾಜದಲ್ಲಿ ಆಗುತ್ತಿರುವ ಬದಲಾವಣೆ, ಇವೆಲ್ಲದರ ಪರಿಣಾಮ ಧರ್ಮದ ನಿರ್ಲಕ್ಷ್ಯವೇ ಕಾರಣವಾಗಿದೆ. ಬಸವಣ್ಣ ಅಂಬೇಡ್ಕರ್, ಮತ್ತು ಚೋಡಯ್ಯ ಅವರಂತಹ ಮಹನೀಯರು ಧರ್ಮದ ಮೂಲಕ ಹೋಗಲಿಲ್ಲ ಅವರೆಲ್ಲರು ಒಂದೆ ಧರ್ಮ ಎಂದು ನಂಬಿದ್ದರು. ಆಧುನಿಕ ಕಾಲದಲ್ಲಿಯೂ ಬಸವಣ್ಣ ಅವರನ್ನು ಇಂದು ಪೂಜಿಸುತ್ತ ಅವರ ಧರ್ಮದ ತತ್ವಗಳನ್ನು ಇಂದಿಗೂ ನಾವು ಪಾಲಿಸುತ್ತಿದ್ದೇವೆ. ಧರ್ಮವು ಮನುಷ್ಯನ ಸರ್ವಾಂಗೀಣ ಬೆಳವಣಿಗೆಗೆ ಸಹಾಯಕವಾಗಿದ್ದು, ಇಂದಿಗೂ ಪ್ರಸ್ತುತವಾಗಿದೆ. ಧರ್ಮದಿಂದ ಇಂದು ಅನೇಕ ರೀತಿ ಸ್ವಯಂ ನಿಯಂತ್ರಣಕ್ಕೆ ಒಳಗಾಗಲು ಮನುಷ್ಯನಿಗೆ ಸಾಧ್ಯವಾಗಿದೆ, ಆದ್ದರಿಂದ ಧರ್ಮವು ಭಾರದಂತಹ ದೇಶದಲ್ಲಿ ಬಹಳ ಮಹತ್ವ ಪಡೆದಿದೆ ಎಂದು ವಿದ್ಯಾರ್ಥಿಗಳು ಧರ್ಮದ ಕುರಿತು ಕುತೂಹಲ ಮೂಡಿಸುವಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆದ ಯುವಜನೋತ್ಸವದಲ್ಲಿ "ಇಂದಿನ ಜೀವನದಲ್ಲಿ ಧರ್ಮದ ಅವಶ್ಯಕತೆ" ಎಂಬ ಕನ್ನಡ ಭಾಷಾ ಚರ್ಚೆಯಲ್ಲಿ ಕೇಳುಗರ ಹುಬ್ಬೇರಿಸುವಂತೆ ಸ್ಪರ್ಧಾಳುಗಳು ತಮ್ಮ ವಾದವನ್ನು ಮಂಡಿಸಿದರು. ಈ ಸ್ಪರ್ಧೆಯಲ್ಲಿ ಆರು ಕಾಲೇಜುಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ ಎಸ್ ವಾಯ್ ಫಾತಿಮಾ ಮತ್ತು ಎಂ.ವಾಯ್. ಹುಣಸಿಮರದ ಸ್ಪರ್ಧೆಯ ಉಸ್ತುವಾರಿ ವಹಿಸದ್ದರು. ಶ್ರೀ ಕರಿಗುದರಿ, ರಾಜಕುಮಾರ ಮಡಿವಾಳರ ಮತ್ತು ಎ.ಜಿ. ಪುರಾಣಿಕ ತೀರ್ಪುಗಾರರಾಗಿ ಆಗಮಿಸಿದ್ದರು.

**ಗಿರಿಜಾ ಬೆಳ್ಳಕ್ಕಿ**
**ಬಿ.ಎ ಪ್ರಥಮ ವರ್ಷ**

# ಪ್ರೇಕ್ಷಕರನ್ನು ರಂಜಿಸಿದ ಮೂಕಾಭಿನಯ, ಕೀರು ನಾಟಕ ಮತ್ತು ಅನುಕರಣೆ ಸ್ಪರ್ಧೆಗಳು




ಮೊಬೈಲ್ ಬಳಕೆಯ ಅವಾಂತರ....ಕಣ್ಣು ದಾನದ ಕುರಿತು ಅದರ ಮಹತ್ವ.... ಮಂಗನಿಂದ ಮಾನವ ವಿಕಾಸ... ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯಂತಹ ವಿಷಯಗಳ ಕುರಿತು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿಬಿಎ ಸಭಾಂಗಣದಲ್ಲಿ ಮೂಕಾಭಿನಯದ ಮೂಲಕ ತಮ್ಮ ವಿವಿಧ ಭಾವ ಭಂಗಿಗಳ ಮೂಲಕ ಸಮಾಜಕ್ಕೆ ಒಂದು ಸಂದೇಶ ಸಾರುವಂತಹ ಪ್ರದರ್ಶನ ನೀಡಿದರು. ಜನರು ದಂಗಾಗುವಂತೆ ತಮ್ಮ ನಟನಾ ಕೌಶಲ್ಯವನ್ನು ವಿದ್ಯಾರ್ಥಿಗಳು ಯುವಜನೋತ್ಸವದಲ್ಲಿ ಪ್ರಸ್ತುತ ಪಡಿಸಿದರು.

ದೇಶದ ಗಣ್ಯ ವ್ಯಕ್ತಿಗಳ ಭಾಷಣ.... ವಾಹನಗಳ ಧ್ವನಿ....ಪ್ರಾಣಿ ಪಕ್ಷಿಗಳ ಧ್ವನಿ ಮತ್ತು ಅವುಗಳ ಅನುಕರಣೆ ಮೂಲಕ ಯುವಜನೋತ್ಸವದಲ್ಲಿ ಪ್ರಮುಖ ಆಕರ್ಷಣೆಯ ಮೂಲಕ ಜನರನ್ನು ವಿದ್ಯಾರ್ಥಿಗಳು ಚಕಿತಗೋಳಿಸಿದರು. ಈ ಪ್ರಸಂಗವು ಬಿಬಿಎ ಸಭಾಂಗಣದಲ್ಲಿ ಮೂಕಾಭಿನಯ ಕುರಿತು ಸ್ಪರ್ಧಾಳುಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಸಿ ಪ್ರೇಕ್ಷಕರಿಗೆ ಮನರಂಜಿಸಿದರು.

ಭಾರತೀಯರಲ್ಲಿ ಧರ್ಮದ ವೈಶಮ್ಯ ಮತ್ತು ಹೆಣ್ಣಿನ ಶೋಷಣೆ ಕುರಿತು ಸಂದೇಶ ಸಾರುವ ಕಿರು ನಾಟಕಗಳ ಸ್ಪರ್ಧೆಯ ಮೂಲಕ ಬಿಬಿಎ ಸಭಾಂಗಣದಲ್ಲಿ ಪ್ರಸ್ತುತ ಪಡಿಸಿದರು. ಈ ನಾಟಕದಲ್ಲಿ ವಿದ್ಯಾರ್ಥಿಗಳು ತಮ್ಮ ಮುಖದ ಹಾವ ಭಾವ, ನಟನಾ ಪ್ರತಿಭೆಯ ಮೂಲಕ ನಾಟಕಗಳನ್ನು ಪ್ರಸ್ತುತ ಪಡಿಸಿದರು.

**ಲಕ್ಷ್ಮಿ ಮೊರಬ**
**ಬಿ.ಎ ಅಂತಿಮ ವರ್ಷ**

# ಕಾರ್ಟೂನ್ ಬಿಡಿಸುವ ಸ್ಪರ್ಧೆ



ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ ಯುವಜನೋತ್ಸವದಲ್ಲಿ ವಿದ್ಯಾರ್ಥಿಗಳು "ಆಸ್ಪತ್ರೆಯಿಂದ ಮರಳಿದ ಜಯಲಲಿತಾ" ಎಂಬ ವಿಷಯದ ಕುರಿತು ಕಾರ್ಟೂನ್ ಬಿಡಿಸುವ ಸ್ಪರ್ಧೆಯನ್ನು ವಿ.ಕೃ ಗೋಕಾಕ್ ಗ್ರಂಥಾಲಯದಲ್ಲಿ ಏರ್ಪಡಿಸಲಾಗಿತ್ತು ಈ ಸ್ಪರ್ಧೆಯಲ್ಲಿ ಏಳು ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿದ್ಯಾರ್ಥಿಗಳು ತಮ್ಮ ಕಲ್ಪನೆಯ ಮೂಲಕ ವಿಷಯದ ಮೇಲೆ ಬೆಳಕು ಚೆಲ್ಲಿದರು.

**ಎಂ.ನಿಂಗಪ್ಪ**
**ಬಿ.ಎ ದ್ವಿತಿಯ ವರ್ಷ**

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಲಕ್ಷ್ಮೀ, ಕನಕ ಲಕ್ಷ್ಮಿ, ಶ್ರೀಹರಿ, ನಿತಿನ. ಶೆಟ್ಟಿ, ಕೆ.ಆರ್. ಚೈತ್ರಾ, ಗಿರಿಜಾ.ಬೆಳ್ಳಕ್ಕಿ, ರವಿ.ನಾಯ್ಕ್, ಪೂಜಾ.ಬಿ, ನಿಂಗಪ್ಪ.ಎಂ..